ದಿನಾಂಕ 19.12.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಆರೋಪಿ ಪರ ವಕೀಲರಿಂದಃ-

ಪೊಲೀಸರು ಮಹಜರ್ ಕಾಲಕ್ಕೆ ಹಾಜರಿರಬೇಕೆಂದು ನನಗೆ ನೋಟಿಸ್ ಕೊಟ್ಟಿರಲಿಲ್ಲ. ಮಹಜರ್‌ಗೆ ನನ್ನನ್ನು ಹೊರತುಪಡಿಸಿ ಶಿವರಾಜುರವರು ಸಹ ಸಹಿ ಹಾಕಿದ್ದಾರೆ. ಮಹಜರ್‌ಗೆ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ಹಿಂದೂಸ್ತಾನ್ ಗೋಲ್ಡ್ ಕಂಪನಿಯವರ ಲೈಸನ್ಸನ್ನು ನಾನು ನೋಡಿರಲಿಲ್ಲ. ಚಿನ್ನದ ಗಟ್ಟಿ ಎಷ್ಟು ಗ್ರಾಂ ತೂಕ ಇತ್ತು ಎಂದು ನನಗೆ ಗೊತ್ತಿಲ್ಲ. ಅದು ಎಷ್ಟು ಬೆಲೆ ಬಾಳುತ್ತಿತ್ತು ಎಂದು ಸಹ ನನಗೆ ಗೊತ್ತಿಲ್ಲ. ಚಿನ್ನದ ಗಟ್ಟಿಯನ್ನು ಆ ದಿನ ನೋಡಿರುವುದನ್ನು ಬಿಟ್ಟು ನಂತರ ಯಾವುದೇ ದಿನದಲ್ಲಿ ನಾನು ನೋಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗೆ ಸಹಾಯವಾಗಲೆಂದು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀ ಎಸ್.ಹೆಚ್.ಪಿ., ಮತ್ತು ಶ್ರೀ ಪಿ.ಡಿ., ವಕೀಲರು ಆರೋಪಿ 1 ಮತ್ತು 3ರವರ ಪರವಾಗಿ 2ನೇ ಆರೋಪಿ ಪರ ವಕೀಲರು ಮಾಡಿರುವ

**ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಃ ಇಲ್ಲ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.